## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಂಗಳೂರು ಜಿಲ್ಲೆ ಪುತ್ತೂರು ತಾಲ್ಲೂಕಿನಲ್ಲಿ ಕೈಗೊಂಡ ಕಾಮಗಾರಿಗಳ ಪರಿಶೀಲನೆಯಲ್ಲಿ ಕಂಡುಬಂದ ಲೋಪದೋಷಗಳ ಬಗ್ಗೆ ಜಂಟಿ ಇಲಾಖಾ ವಿಚಾರಣೆ.

**ಓದಲಾಗಿದೆ:**

1. ಸರ್ಕಾರದ ಕಾರಣ ಕೇಳುವ ಪತ್ರ ಸಂಖ್ಯೆ: ಕೃತೋಇ 13 ಕೃಪಪ 2009. ದಿನಾಂಕ: 10/02/2011.
2. ಶ್ರೀ.ಶ್ರೀರಾಮಯ್ಯ, ಸ.ಕೃ.ನಿ. ರವರ ಲಿಖಿತ ಹೇಳಿಕೆ ದಿನಾಂಕ: 26/03/2011.
3. ಶ್ರೀ.ಜಯರಾಜ್‌ಪ್ರಕಾಶ್ ಸ. ಕೃ. ಅ. ರವರ ಲಿಖಿತ ಹೇಳಿಕೆ ದಿನಾಂಕ: 08/04/2011.
4. ಶ್ರೀ.ಹೆಚ್. ದಯಾನಂದ ಕೃ. ಸ. ರವರ ಲಿಖಿತ ಹೇಳಿಕೆ ದಿನಾಂಕ: 05/04/2011.

*********

**ಪ್ರಸ್ತಾವನೆ:**

ಮಂಗಳೂರು ಜಿಲ್ಲೆ, ಪುತ್ತೂರು ತಾಲ್ಲೂಕಿನಲ್ಲಿ ಕೈಗೊಂಡ ಕಾಮಗಾರಿಗಳು ಇಲಾಖಾ ಮಾರ್ಗಸೂಚಿಗಳನ್ವಯ ಮತ್ತು ಮಂಜೂರಾದ ಅಂದಾಜು ಪತ್ರಿಕೆಗಳನ್ವಯ ಇರದೇ ಕಾಮಗಾರಿಗಳು ಲೋಪದೋಷಗಳಿಂದ ಕೂಡಿರುತ್ತದೆ, ಎಂಬ ಅಪಾದನೆಗಳಿಗೆ ಸಂಬಂಧಿಸಿದಂತೆ ಕೆಳಕಂಡ ಅಧಿಕಾರಿ/ನೌಕರರ ಮೇಲೆ ಉಲ್ಲೇಖ (1) ರಲ್ಲಿ ಓದಲಾದ ಕಾರಣ ಕೇಳುವ ನೋಟಿಸನ್ನು ದೋಷಾರೋಪಣ ಪಟ್ಟಿಯೊಂದಿಗೆ ಜಾರಿಮಾಡಲಾಗಿತ್ತು.

1. ಶ್ರೀ. ಶ್ರೀರಾಮಯ್ಯ, ಸಹಾಯಕ ಕೃಷಿ ನಿರ್ದೇಶಕರು.
2. ಶ್ರೀ. ಜಯರಾಜ್‌ಪ್ರಕಾಶ್, ಸಹಾಯಕ ಕೃಷಿ ಅಧಿಕಾರಿ.
3. ಶ್ರೀ. ಹೆಚ್. ದಯಾನಂದ, ಕೃಷಿ ಸಹಾಯಕ.

ಮೇಲ್ಕಂಡ ಅಧಿಕಾರಿ/ನೌಕರರು ತಮಗೆ ಜಾರಿಮಾಡಿದ ಕಾರಣ ಕೇಳುವ ಪತ್ರಕ್ಕೆ ಮೇಲೆ ಕ್ರಮಾಂಕ 2 ರಿಂದ 4 ರಲ್ಲಿ ಓದಲಾದ ಪತ್ರಗಳಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಅಧಿಕಾರಿಗಳು ಸಲ್ಲಿಸಿರುವ ಹೇಳಿಕೆಗಳಲ್ಲಿ ತಾವು ಕೈಗೊಂಡ ಕಾಮಗಾರಿಗಳು ಇಲಾಖಾ ಮಾರ್ಗಸೂಚಿಗಳನ್ವಯ ಮತ್ತು ಮಂಜೂರಾದ ಅಂದಾಜು ಪತ್ರಿಕೆಗಳನ್ವಯ ಇದ್ದು, ಎಲ್ಲಾ ಕಾಮಗಾರಿಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ನಾಲಾಬದು ಮತ್ತು ಚೆಕ್ ಡ್ಯಾಮ್‌ಗಳೊಂದಿಗೆ ಸಂಪೂರ್ಣವಾಗಿ ನೀರು ತುಂಬಿರುತ್ತದೆ. ಇಲ್ಲಿನ ಮಣ್ಣಿನ ಗುಣ ಮತ್ತು ಮಳೆಯ ಪ್ರಮಾಣವನ್ನು ಪರಿಗಣಿಸಿರುವುರಿಂದ ನೀರು ಅಲ್ಪ ಪ್ರಮಾಣದಲ್ಲಿ ಜಿನುಗುತ್ತಿರುವುದು ಸಾಮಾನ್ಯವಾಗಿರುತ್ತದೆ. ಪುತ್ತೂರು ತಾಲ್ಲೂಕಿನಲ್ಲಿ ಎಲ್ಲಾ ಕಡೆ ಜಲಾನಯನ ಕಾಮಗಾರಿಗಳ ಬಗ್ಗೆ ಉತ್ತಮ ಅಭಿಪ್ರಾಯವಿದ್ದು, ಇಲ್ಲಿಯವರೆಗೂ ತಾಲ್ಲೂಕಿನ ರೈತರಿಂದ ಯಾವುದೇ ದೂರು ಬಂದಿರುವುದಿಲ್ಲ. ಆದ್ದರಿಂದ ಈ ಅನಾಮಧೇಯ ಅರ್ಜಿಯ ವಿವರಗಳು ವಾಸ್ತವಕ್ಕೆ ವ್ಯತಿರಿಕ್ತವಾಗಿದ್ದು, ತಮ್ಮ ಮೇಲಿರುವ ಆರೋಪಗಳನ್ನು ನಿರಾಧಾರವೆಂದು ಪರಿಗಣಿಸಿ ತಮ್ಮನ್ನು ಆರೋಪ ಮುಕ್ತರನ್ನಾಗಿಸಬೇಕೆಂದು ಕೋರಿದ್ದಾರೆ.

39

ಸದರಿ ಅಧಿಕಾರಿಗಳು ಸಲ್ಲಿಸಿರುವ ಹೇಳಿಕೆಗಳನ್ನು ಪರಿಶೀಲಿಸಲಾಗಿ ಅವರುಗಳು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿರುವುದರಿಂದ ಹಾಗೂ ಅವರ ಹೇಳಿಕೆಗಳನ್ನು ಅವರ ಮೇಲಿನ ಆರೋಪಗಳೊಂದಿಗೆ ತುಲನೆ ಮಾಡಿದಾಗ ತೃಪ್ತಿಕರವಾಗಿ ಕಂಡು ಬರದಿರುವುದರಿಂದ ಆ ಬಗ್ಗ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಪ್ರಕರಣದಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 13 ಕೃಪವಿ 2009**
**ಬೆಂಗಳೂರು. ದಿನಾಂಕ: 23/09/2011.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರ ಉಪ ನಿಯಮ (5)ನ್ನು ಓದಿಕೊಂಡು ಉಪ ನಿಯಮ (2) ರಲ್ಲಿ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಕೆಳಕಂಡ ಅಧಿಕಾರಿ/ನೌಕರರ ಮೇಲೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರ ಜೊತೆಗೆ ಓದಲಾದ ನಿಯಮ 13ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ಶ್ರೀ. ಎ.ಎಲ್. ಪೂಜಾರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

1. ಶ್ರೀ. ಶ್ರೀರಾಮಯ್ಯ, ಸಹಾಯಕ ಕೃಷಿ ನಿರ್ದೇಶಕರು.
2. ಶ್ರೀ. ಜಯರಾಜ್‌ಪ್ರಕಾಶ್, ಸಹಾಯಕ ಕೃಷಿ ಅಧಿಕಾರಿ.
3. ಶ್ರೀ. ಹೆಚ್. ದಯಾನಂದ, ಕೃಷಿ ಸಹಾಯಕ.

ಹಾಗೂ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11ರ ಉಪ ನಿಯಮ 5(ಸಿ) ಯಲ್ಲಿ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸರ್ಕಾರವು ಶಿಸ್ತು ಪ್ರಾಧಿಕಾರಿಯ ಪರವಾಗಿ ವಿಷಯವನ್ನು ಮಂಡಿಸಲು ಶ್ರೀ ಸೂರ್ಯಕಾಂತಕೊಂಡಿ, ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.

3. ಶ್ರೀ.ಎ.ಎಲ್. ಪೂಜಾರ್, ನಿವೃತ್ತ ನ್ಯಾಯಾಧೀಶರು ನಂ. 760. ಸೋಮೇಶ್ವರ 4ನೇ ಮುಖ್ಯ ರಸ್ತೆ, ನ್ಯಾಯಾಂಗ ಬಡಾವಣೆ ಜಿ.ಕೆ.ವಿ.ಕೆ. ಪೋಸ್ಟ್, ಬೆಂಗಳೂರು-560 065.
4. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ. ಬೆಂಗಳೂರು.
5. ಶ್ರೀ ಸೂರ್ಯಕಾಂತಕೊಂಡಿ ಕೃಷಿ ಅಧಿಕಾರಿ ಮತ್ತು ಪ್ರಕರಣದ ಮಂಡನಾಧಿಕಾರಿ ಜಲಾನಯನ ಅಭಿವೃದ್ಧಿ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು.
6. ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಮುಖಾಂತರ)
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.